ಅಂದಿದು. ಈ ಮಗೀನ ತೆಗಿಸುಕಲಾ ನಾನೂ. ಅವ್ವಿ, ತಪ್ಪಾಯ್ತೆ ನಂದು. ಆದರೆ ನಂಗೀ ಮೋಸ ಮಾಡಿನಲ್ಲಾ ಅಂವನ್ನಾ ಹಂಗೇ ಸುಮ್ನೆ ಮಾತ್ರ ಬಿಡುಕಲಾ ನಾನು' ಅಂದಳು.

ಇಬ್ಬರಿಗೂ ಊಟ ಒಳಗಿಳಿಯಲಿಲ್ಲ. ತಟ್ಟೆಯಲ್ಲಿದ್ದನ್ನು ನಾಯಿಗೆ ಹಾಕಲು ಹೊರಬಂದರೆ ಜಗುಲಿಯಲ್ಲಿ ಅಣ್ಣ ಮಾದೇವ ಕೂತಿದ್ದ. ಆತ ಬಂದ ಸದ್ದೇ ಆಗಿರಲಿಲ್ಲ. ಬೀರಮ್ಮಕ್ಕನಿಗೆ ಕೈಕಾಲು ಥರಗುಟ್ಟಿದಂತಾಯ್ತು. 'ಅಯ್ಯೋ ಶಿವನೇ! ಕೇಳ್ಸಿಕಂಡನೇನೋ? ಈಗೇನ ಅಂತಿನೋ? ಏನ ಮಾಡ್ತೊನ ಮಗೀಗೆ!' ಎಂದು ಭಯ ಬಿದ್ದಳು. ಆತನ ಮುಖ ನೋಡಿದರೆ ರೌದ್ರ ಕಳೆ ಕುಣಿಯುತ್ತಿತ್ತು. ಚಿಕ್ಕ ಪ್ರಾಯದಲ್ಲಿ ತನ್ನ ತಪ್ಪನ್ನು ಮನ್ನಿಸಿ ಗಂಡ ಬಿಟ್ಟ ತನ್ನನ್ನು ಊರಲ್ಲೇ ಇರಿಸಿಕೊಂಡು ಎರಡೆಕರೆ ಜಮೀನನ್ನೂ ಕೊಟ್ಟು, ತನ್ನೆಲ್ಲ ಕಷ್ಟಸುಖಗಳಿಗೆ ಜೊತೆಯಾಗುತ್ತಿದ್ದ ಅಣ್ಣ ವಾರಕ್ಕೆ ಒಂದೆರಡು ದಿನವಾದರೂ ಮನೆಯವರೆಗೆ ಬಂದು ಹೋಗುತ್ತಿದ್ದ. ಮಗ ಕೌಸ್ತುಭನಿಗೆ ಬೇಬಿಯನ್ನು ತಂದುಕೊಳ್ಳುವ ಮನಸ್ಸು ಅತ್ತಿಗೆಗೆ ಇಲ್ಲದಿದ್ದರೂ ಅಣ್ಣನಿಗೆ ಇತ್ತು. ಆದರೆ 'ಈಗಾದ ಅನಾಹುತ ಹೇಗೆ ಹೇಳಲಿ?' ಎಂದು ಪರಿತಪಿಸತೊಡಗಿದಳು. ಅಷ್ಟರಲ್ಲಿ ಆತನೇ 'ಉಂಡಾದ್ರೆ, ಮಲ್ಗಿ. ನಾ ಹೋತೇ' ಎನ್ನುತ್ತ ಎದ್ದು ಹೊರಟ. ಅವನು ತಾವಾಡಿಕೊಂಡ ಮಾತು ಕೇಳಿಸಿಕೊಂಡಿರುವುದು ಬೀರಮ್ಮಕ್ಕನಿಗೆ ಆತನ ವರ್ತನೆಯಿಂದಲೇ ತಿಳಿಯಿತು. ಮನೆ ಮರ್ಯಾದೆ ತೆಗೆದೆನೆಂದು ತನ್ನ ಸಹಿಸಿಕೊಂಡವನು ಈಗ ತನ್ನ ಮಗಳಿಂದ ನಡೆದ ಇಂತಹ ಅಪಮಾನಕ್ಕೆ ಹೇಗೆ ಪ್ರತಿಕ್ರಿಯಿಸುವನೋ ಅವಳಿಗೆ ಊಹಿಸಲಾಗಲಿಲ್ಲ. ಭಯ ಕಾಡತೊಡಗಿತು. ರಾತ್ರಿಯಿಡೀ ತಾಯಿ– ಮಗಳು ಕಣ್ಣೀರು ಹಾಕಿ, ಬೆಳಗಾಗುವಾಗ ನಿದ್ದೆ ಹೋಗಿದ್ದರು. ಮಳೆ ಬಿಡದೇ ಸುರಿಯುತ್ತಲೇ ಇತ್ತು. ಆಗಾಗ ಒಂದೆರಡು ದಿನ ಸ್ವಲ್ಪ ಸವುಡು ಮಾಡಿದರೆ ಮರುದಿನ ಮತ್ತೆ ಜೋರಾಗುತ್ತಿತ್ತು.

* * *

ಅದೊಂದು ರಾತ್ರಿಯಂತೂ ಸವುಡೇ ಇಲ್ಲದಂತೆ ಹೊಯ್ಯುತ್ತಲೇ ಇತ್ತು. 'ಇಂಥ ಮಳೆ ಬರದೇ ಎಷ್ಟೊಂದ ವರ್ಷಾಯ್ತು, ಅಲ್ದೇನೆ? ಎಂದು ಗಂಡನಿಗೆ ಕೇಳುತ್ತಾ, 'ಬಂದ್ರೆ ಹಿಂಗ ಬತ್ತಿದು. ಹೋದ್ರೆ ಹಾಂಗ್ ಹೋತಿದು, ಇದ್ಕೂ ಬುದ್ದಿಲ್ಲ!' ಎನ್ನುತ್ತಾ ಮಗ್ಗಲು ಬದಲಾಯಿಸಿದಳು ಮೀರಾ... ಅದೆಂಥಾ ನಿದ್ದೆಯೋ ಎಚ್ಚರಾದಾಗ ಬೆಳಿಗ್ಗೆ ಆರೂವರೆ ದಾಟಿತ್ತು. ಮಳೆ ನಿಂತಿತ್ತು. 'ಅಯ್ಯೋ! ಅಯ್ಯೋ ಇಟ್ಹೊತ್ತು ಮನಿಕಂಡೇ ನಾನು' ಎನ್ನುತ್ತಾ ದಡಬಡಿಸಿ ಎದ್ದು ಕೂತವಳು ಹೊರಗೊಮ್ಮೆ ಉದ್ದಕ್ಕೂ ದೃಷ್ಟಿ ಹಾಯಿಸಿದಳು. ಮುಂದಿನ ಚೀರೆಕಲ್ಲು ಬ್ಯಾಣದಲ್ಲಿ ಬಹಳ ಜನ ಓಡಾಡಿಕೊಂಡಿರುವತೆ ಕಂಡಿತು. ಬೇಸರದಿಂದಲೇ ಅಡುಗೆಕೋಣೆ ಹೊಕ್ಕಳು. ತಾಯಿಯ ಹಿಂದೆ ಎದ್ದು ಬಂದ ಮಗ ವಿನೋದ ಮುಖ ತೊಳೆದವನು ಚೀರೆಕಲ್ಲು ಬ್ಯಾಣದಲ್ಲಿ ಜನ ಸೇರಿದ್ದು ನೋಡಿ ರಸ್ತೆ ದಾಟ ಗಣಿ ಕಡೆ ಹೊರಟದ್ದ. ಒಲೆಗೆ ಸೆಗಣಿ ಹಾಕಿ ಸಾರಿಸಿ, ಬೆಂಕಿ ಹಚ್ಚಿದ ಮೀರಾ ಉರಿ ಚೆನ್ನಾಗಿ ಬರುವವರೆಗೂ ದೋಸೆಹಿಟ್ಟನ್ನು ಹದ ಮಾಡತೊಡಗಿದಳು. ಅಷ್ಟರಲ್ಲಿ ಗಣಿ ಕಡೆಯಿಂದ ಮಗ ಓಡೋಡಿ ಬರುತ್ತಿರುವುದು ಕಾಣಿಸಿತು. ಎದುಸಿರುಬಿಡುತ್ತಾ 'ಅವ್ವಾ.. ಅವಾ.. ಅಲ್ಲಿ ಅದೋ ಅಲ್ಲಿ, ವಾಡೇಬುಗ್ರಿ ಮನಿಯೋರ ಗಣಿ ಹೊಂಡದಲ್ಲಿ ಯಾರೋ ಸತ್ತಬಿದ್ದಿರು. ರಾತ್ರಿಗೇ ಸತ್ತ ಬಿದ್ಯಾ ಕಣಾ! ತೇಲಾಡ್ತಿದೂ ಹೆಣ.. ನೋಡ ಬಾರೇ!' ಎನ್ನುತ್ತಲೂ ಎದೆಯೊಳಗೊಂದು ಹೇಳಲಾಗದ ಭಯ ಮತ್ತು ತಳಮಳ ಎರಡೂ ಒಟ್ಟಿಗೆ ಎದ್ದು ಮೀರಾ ನಿಂತಲ್ಲೇ ಬಸವಳಿದಳು. 'ಏನ ಹೇಳ್ತಿಂವೆ ನೀನು. ಅಲ್ಯಾರ ಹೋಗ್ ಸಾಯ್ವರೋ.. ಇಂತಾ ಮಳೀಲಿ' ಎನ್ನುತ್ತಲೇ ಹವಾಯಿ ಚಪ್ಪಲಿ ಮೆಟ್ಟಿದಳು. ಬಾಜೂ ಮನೆಯ ಹೊಂಜಿಮನೆಯ ಸಾತು ಮನೆ ದಣಪೆಯಲ್ಲೆ ನಿಂತಿದ್ದ. 'ವಾಡೇಬುಗ್ರಿ ಮನಿಯೋರ ಗಣೀಲೀ ಯಾರೋ ಸತ್ತ ಬಿದ್ದಿರ್ ಕಂಡಾ!' ಮೀರಾ ಅನ್ನುತ್ತಲೇ ಅವಳ ಜೊತೆ ಅವನೂ ಹೆಜ್ಜೆ ಹಾಕಿದ.

ಸಾವೆಂದರೆ ಭಯಪಡುವ ಮೀರಾ ಸತ್ತು ಬಿದ್ದವನು ಯಾರೆಂದು ನಾನಾ ವಿಚಾರ ಮಾಡುತ್ತ ನಡೆಯತೊಡಗಿದಳು. 'ಈ ರಾತ್ರಿ ಹೊತ್ಗೆ, ಈ ಮಳೀಲಿ ಯಾರ ಅಲ್ಲಿಗ್ ಹೋಗಿದ್ರಾ ಬೆಲಾ, ಕತ್ತಲೀಲಿ ಕಣ್ಣು ಕಾಣ್ದೆ ಬಿದನಾ ಹೆಂಗೀ!. ಇಲ್ಲ ಯಾರರೂ ಕುಂದಿ ತಂದ ಹಾಕ್ದರೋ ಏನೋ? ಇಟ್ ಸಣ್ಣ ಊರಲ್ಲಿ ಹೀಂಗೆಲ್ಲಾ ಆದ್ರೀ. ಅಯ್ಯೋ ದ್ಯಾವ್ರೇ!' ಎನ್ನುತ್ತಾ ಸಂಕಟ ಪಡುತ್ತಾ ನಡೆಯುತ್ತಿದ್ದಳು. ಆಕೆ ಹೆಜ್ಜೆ ಕಿತ್ತಿಡುವಾಗೆಲ್ಲಾ ಉಟ್ಟ ಹಳದಿ ಸೀರೆಯ ಹಿಂಭಾಗದಲ್ಲಿ ಹವಾಯಿ ಚಪ್ಪಲಿ